# ಹರಿ ಹರಿಯೆನಲಿಕ್ಕೆ ಹೊತ್ತಿಲ್ಲ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** Lyrics given without highlights are as per Ref. 1. The wordings in Ref. 2 are similar to Ref. 1, few lines are missing here. Hence, these differences are not considered here.
4. **Note:** Singer has followed these wordings.

ರಾಗ: ಪೂರ್ವಿ ತಾಳ: ಏಕ

ಹರಿ ಹರಿಯೆನಲಿಕ್ಕೆ ಹೊತ್ತಿಲ್ಲ, ಈ
ನರಜನ್ಮ ವ್ಯರ್ಥವಾಗಿ ಹೋಗುತದಲ್ಲ || ಪ ||

ಹರಿ ಜಾಗರಣೆಯಲ್ಲಿ ಪಾರಣೆ ಚಿಂತೆ
ನಿರತ ಯಾತ್ರೆಯಲ್ಲಿ ಶಾಕದ ಚಿಂತೆ
ಸರುವ ಸತ್ಕಾರ್ಯದಿ ಧನದ ಮೇಲಿನ ಚಿಂತೆ
ಪುರಾಣ ಕೇಳ್ವಾಗ ಗೃಹದ ಚಿಂತೆ || 1 ||

ಕರ್ಮದಿ ಒಂದು ಚಿಂತೆ ಧರ್ಮದಿ ಒಂದು ಚಿಂತೆ
ಪೆರ್ಮನ ಮಾಡಲು ಬಲು ಚಿಂತೆ
ವರ್ಮ ವೈರದಿ ಚಿಂತೆ ಈರ್ಮನಸ್ಸಾಗೆ ಚಿಂತೆ
ದುರ್ಮದದಿ ನಡೆಯೆ ಪ್ರಾಣದ ಚಿಂತೆ || 2 ||

ಗಂಗೆ ಮುಳುಗುವಾಗ ಚೆಂಬು ಮೇಲಿನ ಚಿಂತೆ
ಸಂಗಡದವರು ಪೋಗುವರೆಂಬ ಚಿಂತೆ
ಪನ್ನಗ ಶಯನ ಶ್ರೀ ಪುರಂದರ ವಿಠಲನ್ನ
ಹಿಂಗದೆ ಭಜಿಸಲು ಸತತ ನಿಶ್ಚಿಂತೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ವೈದಿಕರಾಗಲಿ ಲೌಕಿಕರಾಗಲಿ ಹರಿಭಕ್ತಿಯನ್ನು ಅಳವಡಿಸಿಕೊಳ್ಳದಿದ್ದರೆ ಚಿಂತೆ ತಪ್ಪಿದ್ದಲ್ಲ. ಬದುಕಿನಲ್ಲಿ ಚಿಂತೆಯ ಬಗೆಗಳನ್ನು ಕುರಿತು ದಾಸರು ಪಟ್ಟಿ ಮಾಡಿದ್ದರೆ.

**ಹರಿ ಜಾಗರಣೆ…** – ಏಕಾದಶಿಯು ಹರಿದಿನ; ಅಂದಿನ ರಾತ್ರಿ ಎಚ್ಚರವಾಗಿದ್ದುಕೊಂಡು ಹರಿಭಜನೆ ಮಾಡಬೇಕೆಂದು ವಿಧಿ. ಹಾಗೆ ಎಚ್ಚರವಾಗಿರುವಾಗ, ಮರುದಿನ, ದ್ವಾದಶಿಯ ಪಾರಣೆಗೆ ಸಿದ್ಧವಾಗಬೇಕೆಂಬ ಚಿಂತೆ.

**ನಿರತ ಯಾತ್ರೆಯಲಿ…** – ನಿತ್ಯ ಯಾತ್ರೆಯಲ್ಲಿ ಅಕ್ಕಿಯೇನೋ ಹರಿದಾಸರಿಗೆ ದೊರೆಯುತ್ತದೆ; ಆದರೆ ತರಕಾರಿಗೇನು ಮಾಡುವುದು ಎಂಬ ಚಿಂತೆ.

**ಪೆರ್ಮನ…** – ಹಿರಿದಾದ ಮನಸ್ಸು, ಔದಾರ್ಯ.

**ವರ್ಮ…** – ಕವಚ ತೊಟ್ಟವನಿಗೆ ಯಾರನ್ನು ಸೆಣಸಲಿ ಎಂಬ ಕಾತರ.

**ಈರ್ಮನಸ್ಸಾಗೆ…** – ಎರಡು ಮನಸ್ಸಾಗಲು.

**Classification:** Keerthane
**Ankita:** sri purandara vittala
**Location:** NA
**Category:** Nama Smarane, Jeevanoddhara
**Sub-Category:** Krishna, janma, nara, rokka, karma, dharma, chinte, shatru, gange, bhajane, purana, mane, prana,
**Pravachana:** NA
**Explanation:** NA